**All India Radio: Bangalore**
**National Bulletin In Kannada**
**21.09.2026 1.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**21.09.2026 1.10 p.m.**
**<><><><>**

ಮುಖ್ಯಾಂಶಗಳು

1. ಗುಜರಾತ್‌ನ ಕೇವಡಿಯಾದಲ್ಲಿ ನಾಳೆ ೭೨ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಷ್ಟ್ರಪತಿ ಭಾಗಿ
2. ಔಷಧಿಗಳ ಸುರಕ್ಷತಾ ಮೇಲ್ವಿಚಾರಣೆ ಕ್ಷೇತ್ರದಲ್ಲಿ ಭಾರತದಿಂದ ಗಮನಾರ್ಹ ಪ್ರಗತಿ - ಕೇಂದ್ರ ಸಚಿವೆ ಅನುಪ್ರಿಯಾ ಪಟೇಲ್
3. ವಿಶ್ವಸಂಸ್ಥೆ ಮಹಾಸಭೆಯ ಅಧಿವೇಶನದಲ್ಲಿ ಪಾಲ್ಗೊಳ್ಳಲು ನ್ಯೂಯಾರ್ಕ್ ತಲುಪಿದ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್
4. ೨೦ನೇ ಏಷ್ಯನ್ ಗೇಮ್ಸ್ ; ಪುರುಷರ ೧೦ ಮೀಟರ್ ಏರ್ ರೈಫಲ್ಸ್ ಸ್ಪರ್ಧೆಯಲ್ಲಿ ಭಾರತದಿಂದ ಪದಕ ಬೇಟೆ ; ರಾಷ್ಟ್ರಪತಿ ಸೇರಿ ಗಣ್ಯರಿಂದ ಶುಭಾಶಯ

<><><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದಿನಿಂದ ಮೂರು ದಿನಗಳ ಕಾಲ ಗುಜರಾತ್ ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ. ನಾಳೆ ಕೇವಡಿಯಾದ ಏಕತಾನಗರದಲ್ಲಿ ನಡೆಯಲಿರುವ ೭೨ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರಧಾನ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಪ್ರಶಸ್ತಿಗಳನ್ನು ವಿತರಿಸಲಿದ್ದಾರೆ. ಬುಧವಾರದಂದು ವಡೋದರಾದ ಮಹಾರಾಜ ಸಾಯಾಜಿರಾವ್ ವಿಶ್ವವಿದ್ಯಾಲಯದ ೭೫ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಲಿರುವ ರಾಷ್ಟ್ರಪತಿಗಳು, ಬ್ರಹ್ಮಕುಮಾರಿಸ್ ಸಂಸ್ಥೆಯ 'ವಿಶ್ವ ನವೀಕರಣಕ್ಕಾಗಿ ಆಧ್ಯಾತ್ಮಿಕ ಜಾಗೃತಿ' ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ ಹಾಗೂ ವಡೋದರಾದ 'ಗ್ಲೋಬಲ್ ಸ್ಪಿರಿಚುಯಲ್ ಪ್ಯಾಲೇಸ್' ರೆಟ್ರೀಟ್ ಸೆಂಟರ್ ಅನ್ನು ಉದ್ಘಾಟಿಸಲಿದ್ದಾರೆ. ಇದೇ ವೇಳೆ, ಬ್ರಹ್ಮಕುಮಾರಿಸ್ ನಡಿಯಾದ್ ಆಯೋಜಿಸಿರುವ 'ವಿಕಸಿತ ಭಾರತಕ್ಕಾಗಿ ಯುವಜನತೆ: ರಾಷ್ಟ್ರ ನಿರ್ಮಾಣಕ್ಕಾಗಿ ಆಂತರಿಕ ಶಕ್ತಿಯ ಜಾಗೃತಿ' ಅಭಿಯಾನವನ್ನು ಸಹ ಅವರು ವರ್ಚುವಲ್ ಮೂಲಕ ಉದ್ಘಾಟಿಸಲಿದ್ದಾರೆ.

<><><><>

ಫಾರ್ಮಾ ಕೋ ವಿಜಿಲೆನ್ಸ್ ಅಂದರೆ ಔಷಧಿಗಳ ಸುರಕ್ಷತಾ ಮೇಲ್ವಿಚಾರಣೆ ಕ್ಷೇತ್ರದಲ್ಲಿ ಭಾರತದ ಪಯಣ ಸ್ವಾವಲಂಬನೆಗೆ ಅತ್ಯುತ್ತಮ ಉದಾಹರಣೆಯಾಗಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರತೀಯ ರಾಷ್ಟ್ರೀಯ ಔಷಧ ಸೂಚಿಯ ೭ನೇ ಆವೃತ್ತಿಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಪ್ರಸ್ತುತ ದೇಶಾದ್ಯಂತ ೧ ಸಾವಿರದ ೧೦೦ಕ್ಕೂ ಹೆಚ್ಚು ಔಷಧಿ ದುಷ್ಪರಿಣಾಮ ಮೇಲ್ವಿಚಾರಣಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, ಈ ಜಾಲವನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಟ್ಟದವರೆಗೂ ವಿಸ್ತರಿಸುವುದು ಸರ್ಕಾರದ ಗುರಿಯಾಗಿದೆ ಎಂದು ತಿಳಿಸಿದ್ದಾರೆ. ವಿಶ್ವಸಂಸ್ಥೆಯ ಜಾಗತಿಕ ರೋಗಿ ಸುರಕ್ಷಿತ ದತ್ತಾಂಶಕ್ಕೆ ಭಾರತ ಫಾರ್ಮ ಕೊ ವಿಜಿಲೆನ್ಸ್ ಮಾಹಿತಿಯನ್ನು ಒದಗಿಸುತ್ತಿದ್ದು, ೨೦೧೪ರಲ್ಲಿ ೧೨೩ನೇ ಸ್ಥಾನದಲ್ಲಿದ್ದ ಭಾರತ ಪ್ರಸ್ತುತ ೮ನೇ ಸ್ಥಾನಕ್ಕೆ ಜಿಗಿದಿದೆ. ಹಾಗೂ ಜಗತ್ತಿನ ೨೫ ರಾಷ್ಟ್ರಗಳು ಭಾರತೀಯ ಫಾರ್ಮ ಕೊಪಿಯಾವನ್ನು ಅಧಿಕೃತವಾಗಿ ಗುರುತಿಸಿ ಸ್ವೀಕರಿಸಿವೆ ಎಂದು ಮಾಹಿತಿ ನೀಡಿದರು.

<><><>

ವಿಶ್ವಸಂಸ್ಥೆಯ ಮಹಾಸಭೆಯ ಉನ್ನತಮಟ್ಟದ ಸಪ್ತಾಹದ ಅಧಿವೇಶನದಲ್ಲಿ ಭಾಗವಹಿಸಲು ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್, ನ್ಯೂಯಾರ್ಕ್ ತಲುಪಿದ್ದು, ಹಿರಿಯ ಭಾರತೀಯ ರಾಜತಾಂತ್ರಿಕರ ನಿಯೋಗ ಅವರನ್ನು ಬರಮಾಡಿಕೊಂಡಿದೆ. ತಮ್ಮ ಭೇಟಿಯ ವೇಳೆ ವಿದೇಶಾಂಗ ಸಚಿವರು, ವಿವಿಧ ರಾಷ್ಟ್ರಗಳ ನಾಯಕರೊಂದಿಗೆ ಸರಣಿ, ದ್ವಿಪಕ್ಷೀಯ ಹಾಗೂ ಬಹುಪಕ್ಷೀಯ ಸಭೆಗಳನ್ನು ನಡೆಸಲಿದ್ದಾರೆ. ಇದೇ ೨೬ರಂದು ಸಚಿವರು ಮಹಾಸಭೆಯನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ತಮ್ಮ ಭಾಷಣದಲ್ಲಿ ಅವರು, ಜಾಗತಿಕ ಪ್ರಮುಖ ವಿಚಾರಗಳ ಕುರಿತು ಭಾರತದ ನಿಲುವು, ಆದ್ಯತೆಗಳು ಹಾಗೂ ಕಳಕಳಿಯ ವಿಷಯಗಳನ್ನು ವಿಶ್ವಸಂಸ್ಥೆಯ ೧೯೩ ಸದಸ್ಯ ರಾಷ್ಟ್ರಗಳ ನಾಯಕರೆದುರು ಮಂಡಿಸಲಿದ್ದಾರೆ. ನಾಳೆಯಿಂದ ಆರಂಭವಾಗಲಿರುವ ಅಧಿವೇಶನದಲ್ಲಿ ವಿವಿಧ ರಾಷ್ಟ್ರಗಳ ವಿದೇಶಾಂಗ ಸಚಿವರು ಹಾಗೂ ವಿಶ್ವಸಂಸ್ಥೆಯ ಉನ್ನತ ಅಧಿಕಾರಿಗಳೊಂದಿಗೆ ಅವರು ಸಮಾಲೋಚನೆ ನಡೆಸಲಿದ್ದಾರೆ. ೨೦೨೮ರಿಂದ ಆರಂಭವಾಗುವ ಎರಡು ವರ್ಷಗಳ ಅವಧಿಗಾಗಿ ಮುಂದಿನ ವರ್ಷ ನಡೆಯಲಿರುವ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಚುನಾವಣೆಗೆ ಭಾರತದ ಸ್ಪರ್ಧೆಯ ಕುರಿತು ಸಚಿವರು ಈ ಸಭೆಗಳಲ್ಲಿ ಬೆಂಬಲ ಕೋರಲಿದ್ದಾರೆ. ಇದೇ ವೇಳೆ

ಭಾರತದ ಆರು ಪ್ರಮುಖ ಅಂಶಗಳನ್ನೊಳಗೊಂಡ ಶಾಂತು-ನಿಯಮ, ನಂಬಿಕೆ ಮತ್ತು ಸಮಗ್ರತೆಯ ಮೂಲಕ ಸರ್ವತೋಮುಖ ಪ್ರಗತಿಯ ಸಾಧನೆ ಎಂಬ ಪ್ರಣಾಳಿಕೆಯನ್ನು ಪ್ರಸ್ತುತಪಡಿಸಲಿದ್ದಾರೆ. ಇದೇ ೨೬ರಂದು ಸಚಿವ ಡಾ.ಎಸ್.ಜೈಶಂಕರ್, ಏಷ್ಯ ಸಂಘ ಆಯೋಜಿಸಿರುವ ವಿಶೇಷ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರಸ್ತುತ ಬಾಂಗ್ಲಾದೇಶದ ವಿದೇಶಾಂಗ ಸಚಿವ ಖಲಿಲುರ್ ರೆಹಮಾನ್, ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದಾರೆ.

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸಾರ್ವಜನಿಕ ಸೇವೆಯಲ್ಲಿ ೨೫ ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ದೇಶಾದ್ಯಂತ 'ಸೇವಾ ಸಂಕಲ್ಪ ಅಭಿಯಾನ' ನಡೆಯುತ್ತಿದೆ. 'ಜನ ಸೇವೆಯೇ ದೇಶ ಸೇವೆ' ಎಂಬ ಮಂತ್ರದಡಿ ಸೇವೆ ಮತ್ತು ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ ೨೦೪೭ರ ವೇಳೆಗೆ ವಿಕಸಿತ ಭಾರತ ಗುರಿ ಸಾಧನೆಯತ್ತ ಸಾಗುತ್ತಿದೆ. ಎಲ್ಲರನ್ನೊಳಗೊಂಡ ಅಭಿವೃದ್ಧಿ ಮತ್ತು ಸಾಮಾಜಿಕ ಸಬಲೀಕರಣದ ಮೂಲಕ ದೇಶದ ಜನರ ಜೀವನದಲ್ಲಿ ಮಹತ್ವದ ಪರಿವರ್ತನೆ ತರಲಾಗುತ್ತಿದೆ. ಅದರ ಭಾಗವಾಗಿ ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ ಮೇಕ್ ಇನ್ ಇಂಡಿಯಾ ಯೋಜನೆ ಕುರಿತು ಒಂದು ನೋಟ ಇಲ್ಲಿದೆ. ಭಾರತವನ್ನು ಜಾಗತಿಕ ಮಟ್ಟದ ಸ್ಪರ್ಧಾತ್ಮಕ ಉತ್ಪಾದನಾ ಕೇಂದ್ರವನ್ನಾಗಿ ಮಾಡುವ ಉದ್ದೇಶದಿಂದ ೨೦೧೪ರಲ್ಲಿ ಪ್ರಾರಂಭಿಸಲಾದ 'ಮೇಕ್ ಇನ್ ಇಂಡಿಯಾ' ಅಭಿಯಾನವು ದೇಶದ ಉತ್ಪಾದನಾ ಕ್ಷೇತ್ರದಲ್ಲಿ ಭಾರಿ ಕ್ರಾಂತಿಯನ್ನುಂಟುಮಾಡಿದೆ. ಸುಲಭ ವಹಿವಾಟು ವಾತಾವರಣ ನಿರ್ಮಿಸುವುದು, ವಿದೇಶಿ ಹೂಡಿಕೆ ಆಕರ್ಷಿಸುವುದು ಮತ್ತು ದೇಶೀಯ ಸಾಮರ್ಥ್ಯಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಕೈಗೊಂಡ ವಿವಿಧ ಕ್ರಮಗಳು ಅತ್ಯುತ್ತಮ ಫಲಿತಾಂಶ ನೀಡುತ್ತಿವೆ. ಉತ್ಪಾದನಾ ಪ್ರೋತ್ಸಾಹಕ ಯೋಜನೆ, ಸೆಮಿಕಂಡಕ್ಟರ್ ಮತ್ತು ಬಿಡಿಭಾಗಗಳ ಕಾರ್ಯಕ್ರಮಗಳು, ಕೈಗಾರಿಕಾ ಕಾರಿಡಾರ್‌ಗಳು, ಸಾರಿಗೆ-ಸಂಪರ್ಕ ವ್ಯವಸ್ಥೆಯ ಸುಧಾರಣೆ ಹಾಗೂ ರಾಷ್ಟ್ರೀಯ ಏಕಗವಾಕ್ಷಿ ವ್ಯವಸ್ಥೆಯ ಬೆಂಬಲದೊಂದಿಗೆ ಈ ಅಭಿಯಾನವು ಸಂಪೂರ್ಣ ಮೌಲ್ಯವರ್ಧಿತ ಸರಪಳಿಯಾಗಿ ಬೆಳೆದಿದೆ. ದೇಶದ ಎಲೆಕ್ಟ್ರಾನಿಕ್ಸ್ ಉತ್ಪಾದನೆಯು ೨೦೧೪-೧೫ ರಲ್ಲಿ ಇದ್ದ ೧.೯ ಲಕ್ಷ ಕೋಟಿ ರೂಪಾಯಿಗಳಿಂದ ೨೦೨೫-೨೬ ರ ವೇಳೆಗೆ ೧೩.೧೧ ಲಕ್ಷ ಕೋಟಿ ರೂಪಾಯಿಗಳಿಗೆ ಏರಿಕೆಯಾಗಿದ್ದರೆ, ಎಲೆಕ್ಟ್ರಾನಿಕ್ಸ್ ರಫ್ತು ೪.೨೪ ಲಕ್ಷ

ಕೋಟಿ ರೂಪಾಯಿಗಳನ್ನು ತಲುಪಿದೆ. ಪ್ರಮುಖವಾಗಿ ಮೊಬೈಲ್ ಫೋನ್ ರಫ್ತು ೧೭೧ ಪಟ್ಟು ಹೆಚ್ಚಾಗಿದ್ದು, ಭಾರತವು ಮೊಬೈಲ್ ಆಮದು ಮಾಡಿಕೊಳ್ಳುವ ದೇಶದಿಂದ ರಫ್ತು ಮಾಡುವ ಪ್ರಮುಖ ದೇಶವಾಗಿ ಹೊರಹೊಮ್ಮಿದೆ. ಮಾರ್ಚ್ ೨೦೨೫ರ ವೇಳೆಗೆ, ೧೪ ಪ್ರಮುಖ ವಲಯಗಳ ಅಡಿಯಲ್ಲಿ ೨.೪೦ ಲಕ್ಷ ಕೋಟಿ ರೂಪಾಯಿಗೂ ಹೆಚ್ಚಿನ ಹೂಡಿಕೆಯಾಗಿದ್ದು, ಸುಮಾರು ೧೪ ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಿವೆ. ಒಟ್ಟಾರೆಯಾಗಿ 'ಮೇಕ್ ಇನ್ ಇಂಡಿಯಾ' ಯೋಜನೆಯು 'ಮೇಡ್ ಇನ್ ಇಂಡಿಯಾ' ಹೆಸರನ್ನು ಜಾಗತಿಕ ಉತ್ಪಾದನಾ ರಂಗದ ಪ್ರಮುಖ ಗುರುತಾಗಿ ಪರಿವರ್ತಿಸಿದೆ.

<><><>

ಕೇರಳದಲ್ಲಿ ನಡೆಯಲಿರುವ ೧೮ನೇ ಅಂತಾರಾಷ್ಟ್ರೀಯ ಸಾಕ್ಷಿ ಚಿತ್ರ ಮತ್ತು ಕಿರುಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳಬೇಕಿದ್ದ ಯಾವುದೇ ಚಿತ್ರಕ್ಕೆ ಅನುಮತಿ ನಿರಾಕರಿಸಲಾಗಿಲ್ಲ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಸ್ಪಷ್ಟಪಡಿಸಿದೆ. ಚಲನಚಿತ್ರೋತ್ಸವದಲ್ಲಿ ೩೧ ಚಿತ್ರಗಳಿಗೆ ಪ್ರದರ್ಶನ ಅನುಮತಿ ನಿರಾಕರಿಸಲಾಗಿದೆ ಎಂದು ಕಾಂಗ್ರೆಸ್ ನಾಯಕ ಶಶಿ ತರೂರ್ ಮಾಡಿದ್ದ ಆರೋಪಕ್ಕೆ ಸಚಿವಾಲಯ ಪ್ರತಿಕ್ರಿಯಿಸಿದೆ. ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಸ್ಪಷ್ಟನೆ ನೀಡಿರುವ ಸಚಿವಾಲಯ, ಆ ಪೈಕಿ ಕೇವಲ ೬ ಚಿತ್ರಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರವಾದ ಚಿತ್ರ ಸಾರಾಂಶವನ್ನು ನೀಡುವಂತೆ ಕೋರಲಾಗಿದೆ. ಅಲ್ಲದೇ ಆಯಾ ಚಲನಚಿತ್ರಗಳ ವಿಷಯವಸ್ತುಗೆ ಅನುಗುಣವಾಗಿ ಪರಿಶೀಲನೆಗಾಗಿ ಅವುಗಳನ್ನು ಸಂಬಂಧಪಟ್ಟ ವಿವಿಧ ವಲಯಗಳ ಪ್ರಾಧಿಕಾರಗಳಿಗೆ ರವಾನಿಸಲಾಗಿದೆ ಎಂದು ಸಚಿವಾಲಯ ವಿವರಿಸಿದೆ.

<><><>

ಕೆನಡಾದಲ್ಲಿ ವಿಮಾನ ತರಬೇತಿ ಪಡೆಯುತ್ತಿದ್ದ ವೇಳೆ ಸಂಭವಿಸಿದ ಭೀಕರ ವಿಮಾನ ಅಪಘಾತದಲ್ಲಿ ತಮಿಳುನಾಡು ಮತ್ತು ಪುದುಚೇರಿ ಮೂಲದ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟಿದ್ದು, ಈ ಘಟನೆ ಕುರಿತು ವ್ಯಾಂಕೋವರ್ ನಲ್ಲಿರುವ ಭಾರತೀಯ ರಾಯಭಾರಿ ಕಚೇರಿ ಸಂತಾಪ ವ್ಯಕ್ತಪಡಿಸಿದೆ. ಸಾಮಾಜಿಕ ಮಾಧ್ಯಮದಲ್ಲಿ ಸಂದೇಶ ಹಂಚಿಕೊಂಡಿರುವ ರಾಯಭಾರಿ ಕಚೇರಿ, ದುಃಖತಪ್ತ ಕುಟುಂಬಸ್ಥರೊಂದಿಗೆ ನಿಲ್ಲುವುದಾಗಿ ತಿಳಿಸಿದ್ದು, ಮೃತರ ಪಾರ್ಥಿವ ಶರೀರಗಳನ್ನು ಭಾರತಕ್ಕೆ ತರಲು ಅಗತ್ಯವಿರುವ ಎಲ್ಲ ರೀತಿಯ ನೆರವನ್ನು ನೀಡಲು ಬದ್ಧವಾಗಿರುವುದಾಗಿ ಕಚೇರಿ ಸ್ಪಷ್ಟಪಡಿಸಿದೆ.

<><><>

ಜಪಾನ್‌ನ ನಗೋಯಾದಲ್ಲಿ ನಡೆಯುತ್ತಿರುವ ೨೦ನೇ ಏಷ್ಯನ್ ಗೇಮ್ಸ್ ಕ್ರಿಡಾಕೂಟದ ಪುರುಷರ ೧೦ ಮೀಟರ್ ಏರ್ ರೈಫಲ್ಸ್‌ನ ಸಿಂಗಲ್ಸ್ ವಿಭಾಗದಲ್ಲಿ ಭಾರತೀಯ ಶೂಟರ್‌ಗಳು ಉತ್ತಮ ಸಾಧನೆ ಮಾಡಿದ್ದು, ಹಿಮಾಂಷು ಡಿಲ್ಲಾನ್, ಬೆಳ್ಳಿ ಹಾಗೂ ರುದ್ರಾಂಕ್ಷ್ ಪಾಟೀಲ್ ಕಂಚಿನ ಪದಕ ಪಡೆದಿದ್ದಾರೆ. ಹಿಮಾಂಷು ೨೫೨.೪ ಅಂಕಗಳೊಂದಿಗೆ ೨ನೇ ಸ್ಥಾನ ಪಡೆದರೆ, ರುದ್ರಾಂಕ್ಷ್ ೨೩೦.೯ ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರು. ಇದಕ್ಕೂ ಮುನ್ನ ನಡೆದ ಪುರುಷರ ೧೦ ಮೀಟರ್ ಏರ್ ರೈಫಲ್ ತಂಡ ವಿಭಾಗದ ಸ್ಪರ್ಧೆಯಲ್ಲಿ ಹಿಮಾಂಶು, ರುದ್ರಾಂಕ್ಷ್ ಹಾಗೂ ಪಾರ್ಥ್ ಮಾನೆ ಅವರನ್ನೊಳಗೊಂಡ ಭಾರತ ತಂಡ ಒಟ್ಟು ೧ ಸಾವಿರದ ೮೯೦.೧ ಅಂಕಗಳೊಂದಿಗೆ ಬೆಳ್ಳಿ ಪದಕ ಗೆದ್ದುಕೊಂಡಿತ್ತು. ಮತ್ತೊಂದೆಡೆ ಮಿಶ್ರ ಮಾರ್ಷಲ್ ಆರ್ಟ್ಸ್-ಎಂಎಂಎ ಮಹಿಳಾ ಸಾಂಪ್ರದಾಯಿಕ ೭೦ ಕೆ.ಜಿ. ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ ಭಾರತದ ಸುಚಿಕಾ ತರಿಯಾಲ್, ಸಿಂಗಾಪುರದ ಹುಯಿ ಹೂನ್ ಟೊ ವಿರುದ್ಧ ೦-೨ ಅಂತರದಲ್ಲಿ ಪರಾಭವಗೊಂಡು ಕಂಚಿನ ಪದಕ ತಮ್ಮದಾಗಿಸಿಕೊಂಡರು. ಪದಕ ಗೆದ್ದಿರುವ ಕ್ರೀಡಾಪಟುಗಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಸೇರಿದಂತೆ ಗಣ್ಯರು ಶುಭಾಶಯ ಕೋರಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>